220 K.V. ಸಬ್-ಸ್ಟೇಷನ್ ಸ್ಥಾಪನೆ

825 (327) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ತೂಬಿನಕೆರೆ-ಸಾತನೂರು ಗ್ರಾಮಗಳ ಸರ್ವೇ ನಂಬರಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ 220 ಕೆ.ವಿ. ಸಬ್ ಸ್ಟೇಷನ್ ಪ್ರಾರಂಭಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಉದ್ದೇಶಿತ ಸಬ್ ಸ್ಟೇಷನ್ ಕಾಮಗಾರಿಯನ್ನು ಪ್ರಾರಂಭಿಸಲು ಈಗಾಗಲೇ ಎಷ್ಟು ಹಣ ಮಂಜೂರಾಗಿದೆ; ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಉದ್ದೇಶಿತ ಸಬ್ ಸ್ಟೇಷನ್ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ) ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಹೌದು.

ಆ) ಈ ಉದ್ದೇಶಿತ ಉಪ ಕೇಂದ್ರಕ್ಕೆ ಅಗತ್ಯವಿರುವ 7 ಎಕರೆ 19 ಗುಂಟೆ ಭೂಮಿಯನ್ನು ಅರಣ್ಯ ಇಲಾಖೆಯಿಂದ ಗುತ್ತಿಗೆ ಆಧಾರದ ಮೇಲೆ 27.30 ಲಕ್ಷ ರೂ.ಗಳನ್ನು ಪಾವತಿ ಮಾಡಿ ದಿನಾಂಕ: 14-11-2011 ರಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಪಡೆದುಕೊಂಡಿದೆ. ಸದರಿ ವಿದ್ಯುತ್ ಉಪ ಕೇಂದ್ರದ ಪೂರ್ವಭಾವಿ ಕೆಲಸಗಳಿಗಾಗಿ 2011-12ನೇ ಸಾಲಿನ ನಿಗಮದ ಆಯವ್ಯಯದಲ್ಲಿ 3.10 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಇ) ಮತ್ತು ಈ) ಉದ್ದೇಶಿತ ವಿದ್ಯುತ್ ಉಪ ಕೇಂದ್ರಕ್ಕೆ ಈ ಮೊದಲೇ ಟೆಂಡರ್ ಕರೆದಿದ್ದು ಅರಣ್ಯ ಇಲಾಖೆಯಿಂದ ಸ್ವಾಧೀನ ಪತ್ರ ದೊರೆಯಲು ವಿಳಂಬವಾದ ಕಾರಣ ಟೆಂಡರನ್ನು ರದ್ದು ಪಡಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಜಮೀನಿನ ಸ್ವಾಧೀನ ಪತ್ರವನ್ನು ಅರಣ್ಯ ಇಲಾಖೆಯಿಂದ ನಿರೀಕ್ಷಿಸಲಾಗಿದ್ದು, ಅನುಮತಿ ಪತ್ರ ದೊರೆತ ನಂತರ ಮರು ಟೆಂಡರ್ ಕರೆದು ಕಾಯಾದೇಶವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು. ಕಾರ್ಯಾದೇಶ ನೀಡಿದ ದಿನದಿಂದ 18 ತಿಂಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.